ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಶ್ರೀ ಕ್ಷೇತ್ರದಲ್ಲಿ ಮಂತ್ರಾಲಯವನ್ನು ಸ್ಥಾಪಿಸುವುದು

೭೧೪. ಶ್ರೀ ಎಸ್. ಎಚ್. ಕೌಜಲಗಿ (ಬೈಲಹೊಂಗಲ).— ಮಾನ್ಯ ಬಂದರು ಮಂತ್ರಿ ಮಿನುಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆಯ ಶ್ರೀ ಕ್ಷೇತ್ರ ಸೋಗಲದಲ್ಲಿ ಮಂತ್ರಾಲಯ ಸ್ಥಾಪಿಸುವ ಅವಶ್ಯಕತೆಯಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಮಂತ್ರಾಲಯ ಸ್ಥಾಪಿಸಲು ಸರಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ರಘುಪತಿ (ಬಂದರು ಮತ್ತು ಮಿನುಗಾರಿಕೆ ಸಚಿವರು).—

ಅ) ಬೆಳಗಾಂ ಜಿಲ್ಲೆಯ ಶ್ರೀ ಕ್ಷೇತ್ರ ಸೋಗಲದಲ್ಲಿ ಮಂತ್ರಾಲಯ ಸ್ಥಾಪಿಸುವ ಬೇಡಿಕೆ ಬಂದಿದೆ.

ಆ) ೧೯೮೫-೮೯ನೇ ಸಾಲಿನಲ್ಲಿ ಇಲ್ಲಿ ಮಂತ್ರಾಲಯ ಸ್ಥಾಪಿಸಲು ಸರ್ಕಾರವು ಅಗತ್ಯವಿರುವ ಹಣವನ್ನು ಒದಗಿಸಲಿದೆ.

ಶ್ರೀ ಎಸ್. ಹೆಚ್. ಕೌಜಲಗಿ.— ಸನ್ಮಾನ್ಯ ಅಧ್ಯಕ್ಷರೇ, ಮಂತ್ರಾಲಯ ಸ್ಥಾಪಿಸಲು ಅನುಮತಿಯನ್ನು ಸರ್ಕಾರ ನೀಡಿರುವುದರಿಂದ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ.

ಶ್ರೀ ಎಂ. ರಘುಪತಿ.— ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದ ನೀತಿ ಏನು ಇದೆ ಎಂದರೆ ಎಲ್ಲೆಲ್ಲಿ ವಿಹಾರ ಸ್ಥಳಗಳು ಇವೆ, ಅಲ್ಲೆಲ್ಲಾ ಮಂತ್ರಾಲಯ ಸ್ಥಾಪನೆ ಮಾಡಬೇಕು ಎಂಬ ಉದ್ದೇಶವಿದೆ. ಏಕೆಂದರೆ ಮಂತ್ರಾಲಯಗಳು ಬಹಳ ಆಕರ್ಷಣೀಯವಾಗಿರುತ್ತವೆ. ಬೆಂಗಳೂರಿನ ಲಾಲ್‌ಬಾಗಿನಲ್ಲಿ ಒಂದು ಮಂತ್ರಾಲಯ ಬಹಳ ಚೆನ್ನಾಗಿ ನಡೆಯುತ್ತಿದೆ. ಜನಕ್ಕಳು ಅದನ್ನು ಉಚಿತವಾಗಿ ನೋಡುತ್ತಾರೆ; ದೊಡ್ಡವರು ದುಡ್ಡು ಕೊಟ್ಟು ನೋಡುತ್ತಾರೆ. ಪ್ರತಿ ಜಿಲ್ಲೆಯಲ್ಲಿ ಮಂತ್ರಾಲಯಗಳನ್ನು ಮಾಡಬೇಕು ಎಂದು ಯೋಚನೆ ಇದೆ. ಪ್ರವಾಸಿಗರು ಎಲ್ಲಿ ಜಾಸ್ತಿ ಸಂಖ್ಯೆಯಲ್ಲಿ ಬರುತ್ತಾರೆ ಅಲ್ಲಿ ಮಂತ್ರಾಲಯಗಳನ್ನು ಮಾಡಬೇಕೆಂಬ ಉದ್ದೇಶ ಇದೆ.

ಖಾಸಗಿ ತಾಂತ್ರಿಕ ಶಿಕ್ಷಣ ಶಾಲೆಗಳನ್ನು ವಶಪಡಿಸಿಕೊಳ್ಳುವುದು

ಅ) ೪೩೧. ಶ್ರೀ ಎಂ.ಎಸ್. ಕೃಷ್ಣನ್(ರಾಜಾಜಿನಗರ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ೨೦ ವರ್ಷಗಳಲ್ಲಿ ಎಷ್ಟು ತಾಂತ್ರಿಕ ಶಿಕ್ಷಣ ಶಾಲೆಗಳು ಸ್ಥಾಪನೆಯಾಗಿದೆ;

(ಖಾಸಗಿ ಮತ್ತು ಸರ್ಕಾರಿ ಪಾಲಿಟೆಕ್ನಿಕ್‌ಗಳ ವಿವರವನ್ನು ವರ್ಷವಾರು ಕೊಡಬೇಕಾಗಿ ವಿನಂತಿ)

ಆ) ಖಾಸಗಿ ಪಾಲಿಟೆಕ್ನಿಕ್‌ಗಳ ವಂತಿಗೆ ಪದ್ಧತಿ, ಅಸಮರ್ಪಕ ಶಿಕ್ಷಣ, ಶಿಕ್ಷಣಕ್ಕೆ ಸೌಲಭ್ಯಗಳಿಲ್ಲದಿರುವ ಬಗ್ಗೆ ದೂರುಗಳು ಸರ್ಕಾರಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ವ್ಯಕ್ತಿ ಪರ ಶುಲ್ಕ : ವಂತಿಗೆ ಪದ್ಧತಿಯನ್ನು ರದ್ದುಪಡಿಸಿ ಸೌಲಭ್ಯಗಳನ್ನೊದಗಿಸಿ ಸರಿಯಾದ ತಾಂತ್ರಿಕ ಶಿಕ್ಷಣ ಕೊಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಈ) ಖಾಸಗಿ ಪಾಲಿಟೆಕ್ನಿಕ್‌ಗಳನ್ನು ಸರ್ಕಾರವೇ ತನ್ನ ವಶಕ್ಕೆ ತೆಗೆದುಕೊಂಡು ನಡೆಸಲು ಕ್ರಮ ಕೈಗೊಳ್ಳುತ್ತವೆಯೆ ; ಇಲ್ಲದಿದ್ದರೆ ಅದಕ್ಕೆ ಕಾರಣಗಳೇನು ?

ಶ್ರೀ ಡಾ॥ ಜೀವರಾಜ್ ಆಳ್ವ (ಉನ್ನತ ಶಿಕ್ಷಣ ಸಚಿವರು).—

೧೪೯. ಕಳೆದ ೨೦ ವರ್ಷಗಳಲ್ಲಿ ರಾಜ್ಯದಲ್ಲಿ ಸ್ಥಾಪನೆಯಾಗಿರುವ ಖಾಸಗಿ ಮತ್ತು ಸರ್ಕಾರಿ ಪಾಲಿಟೆಕ್ನಿಕ್‌ಗಳ ವರ್ಷವಾರು ವಿವರಗಳನ್ನು ಅನುಬಂಧದಲ್ಲಿ ಸಮ್ಮೋದಿಸಲಾಗಿದೆ.

ಆ) ಹೌದು. ಶಿಕ್ಷಣಕ್ಕೆ ಸೌಲಭ್ಯಗಳಿಲ್ಲದಿರುವ ಬಗ್ಗೆ ಮಾತ್ರ ದೂರುಗಳು ಬಂದಿದೆ.

ಇ) ೧) ಆಡಳಿತ ಮಂಡಳಿಗಳು ವ್ಯಕ್ತಿ ಪರ ಶುಲ್ಕ : ವಂತಿಗೆಯನ್ನು ವಸೂಲಿ ಮಾಡಬಾರದೆಂಬ ಷರತ್ತಿನೊಂದಿಗೆ ಎಲ್ಲಾ ಖಾಸಗಿ ಪಾಲಿಟೆಕ್ನಿಕ್‌ಗಳನ್ನು ಮಂಜೂರು ಮಾಡಲಾಗಿದೆ.

೨) ಎಲ್ಲಾ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಪರಿಶೀಲಿಸಿ ಪಾಲಿಟೆಕ್ನಿಕ್‌ನ್ನು ಮುಂದುವರೆಸಲು ಅನುಮತಿಸಬೇಕೇ ಅಥವಾ ಮುಚ್ಚಬೇಕೇ ಎಂಬ ಬಗ್ಗೆ ಖಚಿತವಾದ ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ಪರಿವೀಕ್ಷಣಾ ತಜ್ಞರ ಸಮಿತಿಯನ್ನು ಸರ್ಕಾರದ ಆದೇಶ ಸಂಖ್ಯೆ ಇಡಿ ೫೬ ಟಿಪಿಆರ್ ೮೬ ದಿನಾಂಕ ೫-೮-೧೯೮೭ ರಲ್ಲಿ ರಚಿಸಲಾಗಿದೆ. ಸಮಿತಿಯು ವರದಿಯನ್ನು ದಿನಾಂಕ ೨೬-೧೨-೧೯೮೭ ರಂದು ಸರ್ಕಾರಕ್ಕೆ ಸಲ್ಲಿಸಿದೆ. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಈ) ಖಾಸಗಿ ಪಾಲಿಟೆಕ್ನಿಕ್‌ಗಳನ್ನು ಸರ್ಕಾರವೇ ತನ್ನ ವಶಕ್ಕೆ ತೆಗೆದುಕೊಳ್ಳಲು ಯಾವುದೇ ಕ್ರಮ ಕೈಗೊಂಡಿಲ್ಲ. ಯೋಜನೆಯಲ್ಲಿ ಆರ್ಥಿಕ ಮುಗ್ಗಟ್ಟು ಇರುವುದೇ ಇದಕ್ಕೆ ಕಾರಣವಾಗಿದೆ.

ಪ್ರಶ್ನೆ ಸಂಖ್ಯೆ : 431ಕ್ಕೆ ಅನುಬಂಧ.

ರಾಜ್ಯದಲ್ಲಿ ಕಳೆದ ೨೦ ವರ್ಷಗಳಲ್ಲಿ ಸ್ಥಾಪನೆಯಾಗಿರುವ ಪಾಲಿಟೆಕ್ನಿಕ್‌ಗಳ ವರ್ಷವಾರು ವಿವರಗಳು.

ಕ್ರಮ ಸಂಖ್ಯೆ	ವರ್ಷ	ಖಾಸಗಿ		ಒಟ್ಟು	ಸರ್ಕಾರಿ	ಒಟ್ಟು (೫+೬)
		ಅನುದಾನಿತ	ಅನುದಾನ ರಹಿತ			
೧	೨	೩	೪	೫	೬	೭
೧.	೧೯೬೮-೬೯	—	—	—	೧	೧
೨.	೧೯೬೯-೭೦	—	—	—	—	—
೩.	೧೯೭೦-೭೧	—	—	—	೧	೧
೪.	೧೯೭೧-೭೨	—	—	—	—	—
೫.	೧೯೭೨-೭೩	೧	—	೧	೧	೨
೬.	೧೯೭೩-೭೪	—	—	—	—	—
೭.	೧೯೭೪-೭೫	—	—	—	—	—
೮.	೧೯೭೫-೭೬	೧	—	೧	೧	೨
೯.	೧೯೭೬-೭೭	—	—	—	೧	೧
೧೦.	೧೯೭೭-೭೮	—	—	—	—	—
೧೧.	೧೯೭೮-೭೯	—	—	—	—	—
೧೨.	೧೯೭೯-೮೦	—	—	—	೧	೧
೧೩.	೧೯೮೦-೮೧	೧	೮	೯	—	೯
೧೪.	೧೯೮೧-೮೨	—	—	—	—	—
೧೫.	೧೯೮೨-೮೩	—	೪	೪	—	೪
೧೬.	೧೯೮೩-೮೪	—	೨೨	೨೨	೨	೨೪
೧೭.	೧೯೮೪-೮೫	—	೨೩	೨೩	೧	೨೪
೧೮.	೧೯೮೫-೮೬	—	೨೫	೨೫	೧	೨೬
೧೯.	೧೯೮೬-೮೭	—	೪೩	೪೩	—	೪೩
೨೦.	೧೯೮೭-೮೮	—	೧೦	೧೦	೧	೧೧
	ಒಟ್ಟು	೩	೧೩೫	೧೩೮	೧೧	೧೪೯

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಈ ಜನತಾ ಪಕ್ಷದ ಸದಸ್ಯರು ಕಾಂಗ್ರೆಸ್ ಪಕ್ಷದವರನ್ನು ಸಿಕ್ಕಾಪಟ್ಟೆ ಬೈಯುತ್ತಾರೆ ಆದರೆ ಇಲ್ಲಿ ಕೊಟ್ಟಿರುವ ಅನುಬಂಧವನ್ನು ನೋಡಿದಾಗ ೧೯೬೮-೬೯ ರಿಂದ ೧೯೮೨—೮೩ರವರೆಗೆ ಈ ಹಿಂದಿನ ಕಾಂಗ್ರೆಸ್ ಸರ್ಕಾರದವರು ೧೧ ಖಾಸಗೀ ಪಾಲಿಟೆಕ್ನಿಕ್‌ಗಳಿಗೆ ಅನುಮತಿ ಕೊಟ್ಟಿದ್ದರೆ ನಿಮ್ಮ ಕಾಲದಲ್ಲಿ ಎಂದರೆ ಕಳೆದ ೫ ವರ್ಷಗಳಲ್ಲಿ ೧೨೭ ಖಾಸಗೀ ಪಾಲಿಟೆಕ್ನಿಕ್‌ಗಳಿಗೆ ಅನುಮತಿ ಕೊಟ್ಟಿದ್ದೀರಿ ಇದರ ಜೊತೆಗೆ ಅವರ ಕಾಲದಲ್ಲಿ ೬ ಸರ್ಕಾರಿ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭ ಮಾಡಿದ್ದರೆ ನಿಮ್ಮ ಕಾಲದಲ್ಲಿ ಕೇವಲ್ಲಿ ೫ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭ ಮಾಡಿದ್ದೀರಿ. ನಿಮ್ಮ ಕಾಲದಲ್ಲಿ ೧೨೭ ಖಾಸಗಿ ಪಾಲಿಟೆಕ್ನಿಕ್‌ಗಳಿಗೆ ಅನುಮತಿ ಕೊಡಲು ಇದ್ದ ಕಾರಣವೇನು ? ಇದಕ್ಕೆ ಬದಲು ಸರ್ಕಾರದ ಪಾಲಿಟೆಕ್ನಿಕ್‌ಗಳ ಸಂಖ್ಯೆಯನ್ನೇ ೫ ರಿಂದ ೧೦ ಇಲ್ಲವೇ ೧೨ ಕ್ಕೆ ಹೆಚ್ಚು ಮಾಡಿದಿರಲು ಕಾರಣವೇನು ?

ಶ್ರೀ ಜೀವರಾಜ ಆಳ್ವ.—ಶ್ರೀ ಕೃಷ್ಣನ್ ಅವರಿಗೂ ಸಹ ಗೊತ್ತಿದೆ. ಏನೆಂದರೇ ' The stress is on vocationalisation " ಎಂದು ಹೇಳುತ್ತಾರೆ. ಇದನ್ನು ಹಲವಾರು ಸಲ ನಾನು ಹೇಳಿದ್ದೇನೆ ಇಲ್ಲಿ ಬೇಡಿಕೆಗಳು ಬಂದಂತೆ ಖಾಸಗೀ ಪಾಲಿಟೆಕ್ನಿಕ್‌ಗಳಿಗೆ ಅನುಮತಿ ಕೊಟ್ಟಿದ್ದೇವೆ. ಸರ್ಕಾರದಲ್ಲಿ ಹಣಕಾಸಿನ ತೊಂದರೆ ಇರುವುದರಿಂದ ಸರ್ಕಾರದ ಪಾಲಿಟೆಕ್ನಿಕ್‌ಗಳ ಸಂಖ್ಯೆಯನ್ನು ಹೆಚ್ಚು ಮಾಡುವುದಕ್ಕಾಗಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು The stress is on vocationalisation ಎಂದು ಹೇಳುತ್ತಾರೆ ಎಂದು ಹೇಳಿದರು. ಆದರೆ ಇಲ್ಲಿ ಖಾಸಗಿಯವರಿಗೆ ಹಣ ಮಾಡಿಕೊಳ್ಳಲಂ ನೀವು ಅವಕಾಶ ಮಾಡಿಕೊಟ್ಟಿದ್ದೀರಿ. ಈಗ ತಾವೇ ಒಪ್ಪಿಕೊಂಡಿರುವಂತೆ ಈ ಖಾಸಗೀ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ " ಶಿಕ್ಷಣಕ್ಕೆ ಸೌಲಭ್ಯಗಳಿಲ್ಲದಿರುವ ಬಗ್ಗೆ ಮಾತ್ರ ದೂರುಗಳು ಬಂದಿವೆ " ಎಂದು ಹೇಳಿದ್ದೀರಿ. ಆದರೂ ಅವರು ಎಂತಿಗೆ ವಸೂಲಿ ಮಾಡಲು ಅವಕಾಶ ಮಾಡಿಕೊಟ್ಟಿದ್ದೀರಿ. ಅಲ್ಲಿ ಇಂತಹ ಅಸಮರ್ಪಕ ವ್ಯವಸ್ಥೆ ಇದ್ದರೂ ಸಹ ಈ ಖಾಸಗೀ ಪಾಲಿಟೆಕ್ನಿಕ್‌ಗಳಂ ನಡೆಯಲು ಅವಕಾಶ ಕೊಟ್ಟಿದ್ದೀರಿ' ಇದು ಸರಿಯೇ ? ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಜೀವರಾಜ ಆಳ್ವ.—ವಕೇಷನಲೈಸೇಷನ್ ಮಾಡಬೇಕೆಂಬ ಕಾರಣದಿಂದ ಈ ಖಾಸಗಿ ಪಾಲಿಟೆಕ್ನಿಕ್‌ಗಳಿಗೆ ನಾವು ಅನುಮತಿ ಕೊಟ್ಟಿದುದ್ದು. ಆದರೆ ಅಲ್ಲಿ ಸಾಕಷ್ಟು ಅನುಕೂಲಗಳಿಲ್ಲವೆಂದು ನಮಗೆ ದೂರುಗಳು ಬಂದಿದ್ದರಿಂದ ಅದನ್ನು ತನಿಖೆ ಮಾಡಲು ಒಂದು ಸಮಿತಿಯನ್ನು ನೇಮಕ ಮಾಡಿದ್ದೆವು, ಈಗ ಆ ಸಮಿತಿಯವರು ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಈ ಹಿಂದೆ ನಾನು ಮತ್ತು ಮಾನ್ಯ ಕೃಷ್ಣನ್ ಅವರು ಒಂದೇ ವೇದಿಕೆ ಮೇಲಿದ್ದಾಗ ಈ ಬಗ್ಗೆ ಹೇಳಿದ್ದೇನೆ ; ಏನೆಂದರೆ, ಯಾವುದೇ ಒಂದು ಪಾಲಿಟೆಕ್ನಿಕ್ ಸರಿ ಮಾಡಿದಂಥ ಪರಿಸ್ಥಿತಿಯಲ್ಲಿದ್ದರೆ ಅದನ್ನು ರದ್ದು ಮಾಡುತ್ತೇವೆ ಮತ್ತು ಅದನ್ನು ಪುನರ್‌ರಚನೆ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ ಎಂದು.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಎರಡನೇಯ ಪ್ರಶ್ನೆಗೆ ಉತ್ತರವಾಗಿ ಆಡಳಿತ ಮಂಡಳಿಗಳು ವ್ಯಕ್ತಿ ಪರ ಶುಲ್ಕ ವಂತಿಗೆಯನ್ನು ವಸೂಲಿ ಮಾಡಬಾರದೆಂಬ ಷರತ್ತಿನೊಂದಿಗೆ ಎಲ್ಲಾ ಖಾಸಗೀ ಪಾಲಿಟೆಕ್ನಿಕ್‌ಗಳನ್ನು ಮಂಜೂರು ಮಾಡಲಾಗಿದೆ ಎಂದು ಹೇಳಿದ್ದೀರಿ. ಆದರೆ ಎಷ್ಟು ಖಾಸಗೀ ಪಾಲಿಟೆಕ್ನಿಕ್‌ಗಳು ಈ ಷರತ್ತನ್ನು ಜಾರಿಗೆ ತಂದಿವೆ ? ಒಂದಾದರೂ ಈ ಷರತ್ತನ್ನು ಜಾರಿಗೆ ಬಂದಿದೆಯೇ ? ಈ ಬಗ್ಗೆ ತಮ್ಮ ಮನಸ್ಸಿನಲ್ಲಿರುವುದನ್ನು ಹೇಳಿ ತಾವು ಈ ಬಗ್ಗೆ ಮನಸ್ಸಿನಲ್ಲಿ ಒಂದು, ಮನಸ್ಸಿನಲ್ಲಿ ಹೊರಗಡೆ ಮತ್ತೊಂದು ಇಟ್ಟುಕೊಂಡು ಹೇಳಬೇಡಿ.

ಶ್ರೀ ಜೀವರಾಜ ಆಳ್ವ.—ತಮ್ಮ ಎರಡನೇಯ ಪ್ರಶ್ನೆಗೆ ಉತ್ತರವಾಗಿ ' ಹೌದು ' ಶಿಕ್ಷಣಕ್ಕೆ ಸೌಲಭ್ಯಗಳಿಲ್ಲದಿರುವ ಬಗ್ಗೆ ಮಾತ್ರ ದೂರುಗಳು. " ಎಂದು ಹೇಳಿದ್ದೇನೆ. ಈ ಖಾಸಗಿ ಪಾಲಿಟೆಕ್ನಿಕ್‌ಗಳ ಆಡಳಿತ ಮಂಡಳಿಗಳು ವ್ಯಕ್ತಿ ಪರ ಶುಲ್ಕ : ವಂತಿಗೆಯನ್ನು ವಸೂಲಿ ಮಾಡುತ್ತಿಲ್ಲ ಎಂಬುದು ನಮ್ಮ ಅನಿಸಿಕೆ ಆಗಿದೆ, ಅವರು ಇದನ್ನು ವಸೂಲಿ ಮಾಡುತ್ತಿದ್ದಾರೋ ಅಥವಾ ಇಲ್ಲವೋ ನಮಗೆ ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಇದನ್ನು ತಿಳಿದುಕೊಳ್ಳುವ ಸಲುವಾಗಿ ಸಿ. ಬಿ. ಡಿ. ತನಿಖೆ ಮಾಡಿಸುತ್ತೀರಾ ?

ಶ್ರೀ ಜೀವರಾಜ ಆಳ್ವ —ಯಾವ ಖಾಸಗಿ ಆಡಳಿತ ಮಂಡಳಿಯವರು ಇದನ್ನು ವಸೂಲಿ ಮಾಡುತ್ತಿದ್ದಾರೆಂಬುದನ್ನು ಮಾನ್ಯ ಸದಸ್ಯರು ನನಗೆ ತಿಳಿಸಿದರೆ, ಆ ಸಂಸ್ಥೆಯ ಬಗ್ಗೆ ಸೂಕ್ತ ತನಿಖೆ ಮಾಡಿಸಲು ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಅನುದಾನ ಸಂಹಿತೆಗೊಳಪಟ್ಟ ಕಿರಿಯ ಮಹಾವಿದ್ಯಾಲಯಗಳ ಅಧ್ಯಾಪಕರಿಗೆ ವೇತನ

೨೨೧. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅನುದಾನ ಸಂಹಿತೆಗೊಳಪಟ್ಟಿರುವ ಸಂಯುಕ್ತ ಕಿರಿಯ ಕಾಲೇಜುಗಳು ಮತ್ತು ಪ್ರೌಢ ಶಾಲಾ ಅಧ್ಯಾಪಕರಿಗೆ ರಾಜ್ಯ ಸರ್ಕಾರವು ಪ್ರತಿ ತಿಂಗಳೂ ಅವರ ವೇತನವನ್ನು ಪಾವತಿ ಮಾಡಲಾಗುತ್ತಿದೆಯೇ ;

ಆ) ಕಳೆದ ಮೂರು ತಿಂಗಳುಗಳಿಂದ ಮೇಲ್ಕಂಡ ಉಪನ್ಯಾಸಕರುಗಳಿಗೆ ವೇತನ ವಿತರಣೆ ಮಾಡಲಾಗಿದೆಯೇ ;

ಇ) ಸರಿಯಾಗಿ ವೇತನ ವಿತರಣೆಯಾಗಿರದಿದ್ದರೆ ಹಾಗೇ ವಿತರಣೆಯಲ್ಲಿ ಅಡಚಣೆ ಉಂಟಾಗಿರುವುದಕ್ಕೆ ಕಾರಣಗಳೇನು ;

ಈ) ಉಪನ್ಯಾಸಕರ ಸಂಬಳ ವಿತರಣೆಯ ಬಗ್ಗೆ ರಾಜ್ಯ ಸರ್ಕಾರದವರು ಕೈಗೊಳ್ಳಲಿರುವ ಜರೂರು ಕ್ರಮವೇನು ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳು).—

ಅ) ಹೌದು

ಆ) ಬೆಳಗಾಂ ವಿಭಾಗದ ಕಾಲೇಜುಗಳಿಗೆ ಸ್ವಲ್ಪ ಅಡಚಣೆ ಆಗಿತ್ತು. ಈಗ ಬೆಳಗಾಂ ವಿಭಾಗದ ಎಲ್ಲಾ ಕಾಲೇಜುಗಳಿಗೂ ಸಹ ವೇತನ ಬಿಡುಗಡೆ ಮಾಡಿದೆ.

ಇ) ಉದ್ಭವಿಸದು.

ಈ) ಆಯವ್ಯಯದಲ್ಲಿರುವಂತೆ ಸಂಬಳ ವಿತರಣೆ ಮಾಡಲಾಗುವುದು. ಸಾಲದೇ ಬಂದಿಗೆ ಹೆಚ್ಚಿನವರಿ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮಂತ್ರಿಗಳು ಇಲ್ಲಿ ಬೆಳಗಾಂ ವಿಭಾಗದ ಕಾಲೇಜುಗಳಿಗೆ ಸ್ವಲ್ಪ ಅಡಚಣೆ ಆಗಿತ್ತು ಎಂದು ಹೇಳಿದ್ದಾರೆ, ಆದರೆ ಈ ಬಗ್ಗೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಂತ್ರಿಗಳ ಮನೆ ಮುಂದೆ ಸತ್ಯಾಗ್ರಹ ಮಾಡುತ್ತೇವೆಂದು ಈ ಅಧ್ಯಾಪಕರುಗಳು ತಿಳಿಸಿದ್ದರ ಮೇರೆಗೆ ಕಳೆದ ನವೆಂಬರ್ ಮತ್ತು ಡಿಸೆಂಬರ್ ತಿಂಗಳ ಸಂಬಳವನ್ನು ಜನವರಿ ತಿಂಗಳಲ್ಲಿ ಕೊಟ್ಟಿದ್ದೀರಿ ಮತ್ತೆ ಬರುವ ಏಪ್ರಿಲ್ ತಿಂಗಳವರೆಗೆ ಆಯಾ ತಿಂಗಳ ಸಂಬಳವನ್ನು ಆಯಾ ತಿಂಗಳಲ್ಲಿಯೇ ಇಡೀ ರಾಜ್ಯದಲ್ಲಿ ವಿತರಣೆ ಮಾಡಲು ವ್ಯವಸ್ಥೆ ಮಾಡುತ್ತೀರಾ ? ಮತ್ತೆ ಎರಡನೆಯದಾಗಿ ಈ ಅನುದಾನ ಸಂಹಿತೆಗೊಳಪಟ್ಟಿರುವ ಅಧ್ಯಾಪಕರುಗಳು ಏನು ಚಿಂತೆ ಮಾಡಬೇಕಿದ್ದಾರೆಂದರೆ. ತಮ್ಮ ಸಂಬಳವನ್ನು ಶೇಕಡ ೭೫ಕ್ಕೆ ಇಳಿಸುತ್ತಾರೆಂದು ? ಈಗ ಶೇಕಡ ಇಪ್ಪರುಗಳಿಗೆ ನೂರರಷ್ಟು ಕೊಡುತ್ತಿರುವ ವೇತನವನ್ನು ಶೇಕಡ ೭೫ಕ್ಕೆ ಇಳಿಸಬೇಕೆಂಬ ಒಗ್ಗ ತಾವು ಏನಾದರೂ ಸುತ್ತೋಲೆಯನ್ನು ಕಳುಹಿಸಿಕೊಡುವುದಕ್ಕೆ ವ್ಯವಸ್ಥೆ ಮಾಡುತ್ತಿದ್ದೀರಾ ಹೇಗೆ ಎಂಬುದನ್ನು ಸಹ ತಾವು ತಿಳಿಸಬೇಕು ?

ಶ್ರೀ ಬಿ. ಸೋಮಶೇಖರ್.—ಮಾನ್ಯ ಅಧ್ಯಕ್ಷರೆ, ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಹೇಳುವುದಾದರೆ, ಸಂಬಳವನ್ನು ಅವರಿಗೆ ಸರಿಯಾದ ಕಾಲದಲ್ಲಿ ವಿತರಣೆ ಮಾಡಬೇಕು ಆ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾ ಇದ್ದೇವೆ, ಇನ್ನು ಮುಂದೆ ಆ ತೊಂದರೆಯಾಗುವುದಿಲ್ಲ. ಇನ್ನು ಎರಡನೆಯ ಪ್ರಶ್ನೆಗೆ ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಉತ್ತರ ಕೊಡುತ್ತೇನೆ.